

## ಹಿತ್ತಲಿನ ಸ್ವರ್ಣ ಅರಿಯುವ ಔಚಿತ್ಯ

'ಹಿತ್ತಲ ಗಿಡ ಮದ್ದಲ್ಲ' ಎಂಬುದು ಕನ್ನಡದ ಜನಪ್ರಿಯ ಗಾದೆಮಾತು. ಇದರರ್ಥ, ನಾವು ಮನೆಯ ಹಿತ್ತಲಿನಲ್ಲಿ ಸಿಗುವ ಸಣ್ಣಪುಟ್ಟ ಔಷಧೀಯ ಗಿಡಗಳ ಮೌಲ್ಯವನ್ನು ಗುರುತಿಸದೆ, ದೂರದ ವಸ್ತು ಅಥವಾ ಔಷಧಿಗೆ ಅತಿಯಾದ ಬೆಲೆ ನೀಡಿ ಕೊಂಡುಕೊಳ್ಳುವುದು. ನಮ್ಮ ಮನೆಯ ಹಿತ್ತಲಿನಲ್ಲಿ ಬೆಳೆಯುವ ಗಿಡಗಳು ಅತ್ಯುತ್ತಮ ಔಷಧೀಯ ಗುಣಗಳನ್ನು ಹೊಂದಿದ್ದರೂ, ಅದನ್ನು ನಂಬದೆ ಅಥವಾ ಒಂಚೂರೂ ಗುರುತಿಸದೆ ಇಂಗ್ಲಿಷ್ ಔಷಧಿಯನ್ನೇ ಉತ್ತಮ ಎಂದು ಭಾವಿಸುತ್ತೇವೆ.



ನೀವೀಗ ನೋಡ್ತಾ ಇರೋದು ಬರೀ ಕಾಡು ಗಿಡವಲ್ಲ, ಅದು ನಮ್ಮ ಪಾಲಿಗೆ ಬಂಗಾರ. ಸುಮಾರು 4000 ವರ್ಷಗಳ ಇತಿಹಾಸ ಹೊಂದಿರುವ ಈ ಗಿಡದ ಹೆಸರು 'ಗೋಲ್ಡನ್ ಬೆರ್ರಿ'. ಕಾಗದದಂತಹ ಸಿಪ್ಪೆಯನ್ನು ಹೊಂದಿರುವ ಈ ಹಣ್ಣು ಹಳದಿ ಕಿತ್ತಳೆ ಅಥವಾ ಚಿನ್ನದ ಬಣ್ಣವನ್ನು ಹೊಂದಿದ್ದು, ಸಿಹಿಹುಳಿ ರುಚಿಯಿಂದ ಕೂಡಿದೆ. ಇದನ್ನು ಹಳ್ಳಿಗಳಲ್ಲಿ ಪೊಟ್ಲಕಾಯಿ, ಗುಪ್ಪಟ್ಟೆ ಹಣ್ಣು, ಗೊಮ್ಮಟೆಕಾಯಿ ಎಂದೂ ಕರೆಯುತ್ತಾರೆ. ಇದು ವಿಟಮಿನ್ ಸಿ ಹೊಂದಿದ್ದು, ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ ಎನ್ನುವುದು ನಮ್ಮ ಹಿರೀಕರ ಮಾತು. ಜೀರ್ಣಕ್ರಿಯೆಯನ್ನು ಸುಧಾರಿಸಿ, ಹಾನಿಕಾರಕ ಕೊಲೆಸ್ಟ್ರಾಲ್ ಕಡಿಮೆ ಮಾಡುತ್ತದೆ. ತೂಕ ಇಳಿಕೆಗೆ ಉಪಯುಕ್ತ ಹಾಗೂ ಸಕ್ಕರೆ ಕಾಯಿಲೆಯನ್ನು ಹಿಡಿತದಲ್ಲಿಡಲು ಸಹಕಾರಿ.

–ಪ್ರಮೀಳಾ ವಾಟೆಕಜೆ




## ಗೋಡೆಗಳ ಮೇಲೆ ಸಾಧಕರು

ಸವದತ್ತಿ ತಾಲ್ಲೂಕಿನ ಇನಾಮಹೊಂಗದಲ್ಲಿನ ಶ್ರೀ ಕೃಷ್ಣ ಹೋಟೆಲ್‌ನಲ್ಲಿನ ಗೋಡೆಯ ಮೇಲಿನ ಚಿತ್ರಗಳಿವು. ಧಾರವಾಡಕ್ಕೆ ಹೋಗುವ ಮುಖ್ಯ ರಸ್ತೆಯಲ್ಲಿರುವ ಹೋಟೆಲ್ ಇದೆ. ಒಳಗೆ ಕಾಲಿಟ್ಟರೆ ಗೋಡೆಗಳ ಮೇಲೆ ನಾಡಿನ ಮಹಾನ್ ವ್ಯಕ್ತಿಗಳ, ಸಾಧಕರ ಚಿತ್ರಗಳು ಗಮನಸೆಳೆಯುತ್ತವೆ. ಕುವೆಂಪು, ದ.ರಾ. ಬೇಂದ್ರೆ ಸೇರಿದಂತೆ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಚಿತ್ರಗಳು ರಾರಾಜಿಸುತ್ತವೆ. ಜೊತೆಗೆ ಗಂಗೂಬಾಯಿ ಹಾನಗಲ್, ಪುಟ್ಟರಾಜ ಗವಾಯಿ, ಸಾಲುಮರದ ತಿಮ್ಮಕ್ಕ, ಸೂಲಗಿತ್ತಿ ನರಸಮ್ಮರ ಚಿತ್ರಗಳೂ ಸೆಳೆಯುತ್ತವೆ. ದೇಶಕ್ಕಾಗಿ ತ್ಯಾಗ ಮಾಡಿದ ಕಾರ್ಗಿಲ್ ವೀರ ಯೋಧ ಸೌರಭ ಕಾಲಿಯಾ, ಹುತಾತ್ಮ ಮೇಜರ್ ಸಂದೀಪ ಉನ್ನಿಕೃಷ್ಣನ್ ಸೇರಿದಂತೆ ಹಲವು ಯೋಧರ ಚಿತ್ರಗಳು ಮತ್ತು ಕನ್ನಡ ಚಿತ್ರರಂಗದ ಮುತ್ತುರತ್ನಗಳು ಇಲ್ಲಿದ್ದಾರೆ.

ಹೋಟೆಲ್ ಮಾಲೀಕ ಪ್ರವೀಣ ಶೆಟ್ಟಿ ಅವರ ಆಸಕ್ತಿಯಿಂದ ಈ ತರಹದ ಚಿತ್ರಗಳು ಇಲ್ಲಿ ಗೋಡೆಗೇರಿವೆ. ಹೋಟೆಲ್‌ನಲ್ಲಿ ಎತ್ತ ನೋಡಿದರೂ ಸಾಧಕರ ಚಿತ್ರಗಳು ಗಮನಸೆಳೆದು ಮನಸ್ಸಿಗೆ ಮುದ ನೀಡುತ್ತವೆ. ಟೀ, ಟಿಫಿನ್ ಮುಗಿಸುವುದರೊಳಗೆ ನಾಡಿನ ಸಾಧಕರೆಲ್ಲ ಮನಸ್ಸಿನಲ್ಲಿ ಅಚ್ಚೊತ್ತುತ್ತಾರೆ. 'ಹೋಟೆಲ್‌ಗೆ ಬರುವ ಗ್ರಾಹಕರು ನಾಡಿನ ಸಾಧಕರ, ಮಹಾನ್ ವ್ಯಕ್ತಿಗಳ ಚಿತ್ರಗಳನ್ನು ನೋಡಿ ಖುಷಿ ವ್ಯಕ್ತಪಡಿಸುತ್ತಾರೆ. ಜೊತೆಗಿರುವ ಮಕ್ಕಳು ಮಹಾನ ವ್ಯಕ್ತಿಗಳ ಚಿತ್ರಗಳನ್ನು ಕಣ್ತುಂಬಿಕೊಳ್ಳುತ್ತಾರೆ. ಇದುವೇ ನನಗೆ ಬೇಕಿರುವುದು' ಎನ್ನುತ್ತಾರೆ ಪ್ರವೀಣ ಶೆಟ್ಟಿ.

–ಬಾಲಶೇಖರ ಬಂದಿ, ಮೂಡಲಗಿ

## ಇರುವೆ ಗೂಡು

ದಾವಣಗೆರೆಯ ದುಗ್ಗಮ್ಮ ಜಾತ್ರೆಗೆ ಬೆಂಗಳೂರಿಂದ ಬಂಧುಗಳು ಬಂದಿದ್ದರು. ಅವರೆಲ್ಲರನ್ನೂ ಕರೆದುಕೊಂಡು ಜಾತ್ರೆಯಲ್ಲೊಮ್ಮೆ ಸುತ್ತಾಡಿದ ನಂತರ ಇಲ್ಲಿನ ಥೀಮ್ ಪಾರ್ಕ್ ಕಡೆಗೆ ಕರೆದೊಯ್ದೆ. ಅಲ್ಲಿನ ಗ್ರಾಮೀಣ ಕಲೆ, ಸಾಹಿತ್ಯ, ಸಂಸ್ಕೃತಿ, ಗ್ರಾಮೀಣ ಜನರ ಬದುಕು, ದೇಸಿ ಕ್ರೀಡೆಗಳ ಕಲರವವನ್ನು ಪ್ರತಿನಿಧಿಸುವ ಕಲಾಕೃತಿಗಳು ನಮ್ಮೆಲ್ಲರ ಕಣ್ಮನ ಸೆಳೆಯುತ್ತಿದ್ದವು. ಅದರಲ್ಲೂ ಇರುವೆ ಗೂಡು ನೋಡಿ ಖುಷಿ ಆಯ್ತು. ಇಲ್ಲಿ ನಿರ್ಮಿಸಿದ ಏಳೆಂಟು ಅಡಿ ಎತ್ತರದ ಹಾಗೂ ವಿವಿಧ ಕೋಣೆಗಳಿರುವ ಇರುವೆಯ ಗೂಡು ಹಾಗೂ ಗೊದ್ದಗಳು ಆಹಾರ ಹೊತ್ತು ಗೂಡಿಗೆ ಹೋಗುತ್ತಿರುವಂತೆ ರಚಿತವಾದದ್ದು ನೋಡಲು ಸೊಗಸಾಗಿತ್ತು. ನಮ್ಮೊಂದಿಗೆ ಬಂದ ಮಕ್ಕಳು ಇರುವೆಯ ಮನೆ ನೋಡಿ ಖುಷಿಪಟ್ಟರು.

–ರಘುನಾಥರಾವ್ ರಾವ್ ತಾಪ್ಸೆ, ದಾವಣಗೆರೆ

